## ಮೈಸೂರು ನಗರದಲ್ಲಿಯ ಪಡುವಾರ ಹಳ್ಳಿ ಬಡಾವಣೆಗೆ ಸಂಬಂಧಿಸಿದಂತೆ

೪೧೮೮. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ). ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಪಡುವಾರಹಳ್ಳಿ ಬಡಾವಣೆ ನಿರ್ಮಾಣ ಮಾಡಲು ನಗರಾಭಿವೃದ್ಧಿ ಸಮಿತಿಯು ಖರ್ಚು ಮಾಡಿದ ಹಣವೆಷ್ಟು ?

ಆ) ಸದರಿ ನಿವೇಶನಗಳನ್ನು ಹಂಚಲು ಅರ್ಜಿಗಳನ್ನು ಕರೆಯಲಾಗಿತ್ತೇ ?

ಇ) ಹಾಗಿದ್ದಲ್ಲಿ ನಿವೇಶನಗಳನ್ನು ಹಂಚಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಈ) ಈ ಬಡಾವಣೆಯನ್ನು ಯಾವಾಗ ಹಾಗೂ ಯಾವ ಆಧಾರದ ಮೇಲೆ ಸರ್ಕಾರ ವಶಪಡಿಸಿಕೊಂಡಿತು.

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೪೪.೭೧ ಲಕ್ಷ ರೂಪಾಯಿಗಳು.

ಆ) ಹೌದು.

ಇ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದಿರುವುದರಿಂದ. ಈ ವಿಷಯದ ಬಗ್ಗೆ ಪ್ರಾಧಿಕಾರದ ಒಪ್ಪಿಗೆ ಪಡೆದು ಪರಿಷ್ಕೃತ ಪ್ರಸ್ತಾವನೆಯು ಬಂದನಂತರ ನಿವೇಶನಗಳ ಹಂಚಿಕೆಗೆ ಮಂಜೂರಾತಿಯನ್ನು ಕೊಡಲಾಗುವುದು.

ಈ) ಸರ್ಕಾರದ ಆದೇಶ ಸಂಖ್ಯೆ ವನಇ ೧೬೫ ಎಂಬಿಬಿ ೮೨ ದಿನಾಂಕ ೨೨-೬-೮೩ರಲ್ಲಿ ಈ ಬಡಾವಣೆಯನ್ನು ರಚಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿತ್ತು.

## ಪೌರ ಕಾರ್ಮಿಕರಿಗೆ ರಜಾ ಸೌಲಭ್ಯದ ವಿಷಯ

೪೧೯೯. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಇತರೆ ಇಲಾಖೆಗಳಿಗೂ ನೀಡುವಂತೆ ರಾಷ್ಟ್ರೀಯ ಹಾಗೂ ಸಾರ್ವತ್ರಿಕ ರಜಾ ದಿನಗಳನ್ನು ಪೌರ ಕಾರ್ಮಿಕರಿಗೆ ನೀಡಲು ಕಾರಣವೇನು ?

ಆ) ಇತರೆ ಸರ್ಕಾರಿ ನೌಕರರಿಗೆ ನೀಡುವಂತೆ ಪೌರ ಕಾರ್ಮಿಕರಿಗೆ ರಜಾ ಸೌಲಭ್ಯ ನೀಡದಿದ್ದಲ್ಲಿ, ಇದು ತಾರತಮ್ಯ ಮಾಡಿದಂತಾಗುವುದಿಲ್ಲವೇ ?

ಇ) ಹಾಗಿದ್ದಲ್ಲಿ ರಜಾ ನೀಡಿದ ದಿನಗಳಲ್ಲಿ ಕೆಲಸ ಮಾಡುವ ಪೌರ ಕಾರ್ಮಿಕರಿಗೆ ಯಾವ ವಿಶೇಷ ಸೌಲಭ್ಯಗಳನ್ನು ನೀಡಲಾಗುತ್ತಿದೆ ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಪೌರ ಕಾರ್ಮಿಕರ ಸೇವೆಯು ಇನ್ನಿತರ ಇಲಾಖೆಗಳಲ್ಲಿರುವ ನೌಕರರ (ಅಂದರೆ ಆಸ್ಪತ್ರೆ, ನೀರು ಸರಬರಾಜು) ಸೇವೆಯಂತೆ ಅಗತ್ಯವಾಗಿರುವುದರಿಂದ ಸಾರ್ವತ್ರಿಕ ರಜಾ ದಿನಗಳಲ್ಲೂ ಸಹ ಅವರು ಭಾಗಶಃ ಕೆಲಸ ನಿರ್ವಹಿಸಬೇಕಾಗುತ್ತದೆ.

ಆ) ರಜಾ ಸೌಲಭ್ಯಗಳನ್ನು ಅಂದರೆ ಗಳಿಕೆ ರಜಾ ಮತ್ತು ಪರಿವರ್ತಿತ ರಜಾ ಪೌರ ಕಾರ್ಮಿಕರಿಗೂ ಸಹ ನೀಡಲಾಗುತ್ತಿದೆ.

ಇ) ಪರಿಶೀಲನೆಯಲ್ಲಿದೆ.